ರಂತೆ ಜಿಲ್ಲಾ ಪರಿಷತ್‌ನಿಂದ ನೇಮಕ ಹೊಂದಿದ ಗೌರವ ಶಿಕ್ಷಕರಿಗೆ ಮಾತ್ರ ನೇಮಕಾತಿಯಲ್ಲಿ ಕೃಪಾಂಕ ನೀಡಿ ವಯೋಮಿತಿ ಸಡಿಲಿಕೆ ನೀಡಿ ಆಯ್ಕೆ ಮಾಡಲು ಅವಕಾಶವಿದ್ದುದರಿಂದ ಬಿಜಾಪುರ ಜಿಲ್ಲೆಯಲ್ಲಿ ಮಂಡಲ ಪಂಚಾಯಿತಿಯಿಂದ ನೇಮಕ ಹೊಂದಿದ ಗೌರವ ಶಿಕ್ಷಕರು ಕೆಲಸ ಮಾಡುತ್ತಿದ್ದುದರಿಂದ ಅವರಿಗೆ ಈ ಸೌಲಭ್ಯ ನೀಡಿರುವುದಿಲ್ಲ.

ಮಂಡಲ ಪಂಚಾಯಿತಿಯಿಂದ ನೇಮಕ ಮಾಡಲ್ಪಟ್ಟಿದ್ದರೂ ಸಹ ಮಂಡಲ ಪಂಚಾಯಿತಿ ಅಧಿಕಾರಿಗಳು ನೇಮಕಾತಿ ಪ್ರಾಧಿಕಾರವಾಗಿಲ್ಲದಿರುವುದರಿಂದ ಹಾಗೂ ಈ ಅಭ್ಯರ್ಥಿಗಳ ನೇಮಕಾತಿಯು ನಿಯಮಾನುಸಾರ ಇಲ್ಲದಿರುವುದರಿಂದ ಇಂತಹ ಗೌರವ ಶಿಕ್ಷಕರಿಗೆ ಕೃಪಾಂಕ ನೀಡಲು ಬರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1681 (1566)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದೇಶದ ಏಳು ರಾಜ್ಯಗಳಲ್ಲಿ ಜಾರಿಗೆ ಬಂದಿರುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಂತೆ ಈ ರಾಜ್ಯದಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ಯಾವ ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಿ ಕೊಳ್ಳಲಾಗಿದೆ?

ಆ) ಸಂಬಂಧಪಟ್ಟ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಮಾನದಂಡ ಏನಾದರೂ ಇದೆಯೇ ಹಾಗಿದ್ದಲ್ಲಿ ಆ ಮಾನದಂಡ ವಿವರಗಳನ್ನು ಒದಗಿಸುವುದು?

ಇ) ಈ ಕಾರ್ಯಕ್ರಮ (ಡಿ.ಪಿ.ಇ.ಪಿ.)ಯಡಿಯಲ್ಲಿ ಪ್ರತಿ ಜಿಲ್ಲೆಗೆ ಕೇಂದ್ರ ಸರ್ಕಾರ ನೀಡಿರುವ ಹಣದ ಮೊತ್ತವೆಷ್ಟು?

ಈ) ಕಾರ್ಯಕ್ರಮದನ್ವಯ ಮಂಡ್ಯ ಜಿಲ್ಲೆಯಲ್ಲಿ ಇದುವರೆವಿಗೂ ಎಷ್ಟು ಹಣ ಬಿಡುಗಡೆಯಾಗಿದ್ದು ಹಾಗೂ ಖರ್ಚು ಮಾಡಲಾದ ಹಣವೆಷ್ಟು?(ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ರಾಜ್ಯದ ಕೋಲಾರ, ರಾಯಚೂರು, ಮಂಡ್ಯ ಮತ್ತು ಬೆಳಗಾಂ ಜಿಲ್ಲೆಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಕಾರ್ಯಕ್ರಮದಲ್ಲಿ ಅನುಷ್ಠಾನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಆ) ಕೇಂದ್ರ ಸರ್ಕಾರದ ಈ ಕೆಳಕಂಡ 2 ಮಾನದಂಡಗಳನ್ನು ನಿಗದಿಪಡಿಸಿದೆ.

1) ಶೈಕ್ಷಣಿಕವಾಗಿ ಹಿಂದುಳಿದ ಹಾಗೂ ರಾಷ್ಟ್ರೀಯ ಮಹಿಳಾ ಸಾಕ್ಷರತೆಯ ಸರಾಸರಿಗಿಂತ ಕಡಿಮೆ ಇರುವ ಜಿಲ್ಲೆ.

2)ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಯಶಸ್ವಿಯಾಗಿ ಪೂರೈಸಿ ತನ್ಮೂಲಕ ಪ್ರಾಥಮಿಕ ಶಿಕ್ಷಣಕ್ಕಾಗಿ ಹೆಚ್ಚಿನ ಬೇಡಿಕೆಯನ್ನು ಉಂಟು ಮಾಡಿರುವ ಜಿಲ್ಲೆ.

ಇ) ಹಣ ನೀಡುವಿಕೆಯ ಪ್ರಮಾಣ ಪ್ರತಿಯೊಂದು ಜಿಲ್ಲೆಯ ಅವಶ್ಯಕತೆಗಳ ಯೋಜನೆ ಹಾಗೂ ಅದರ ಅವಲೋಕನವನ್ನು ಅವಲಂಬಿಸಿರುತ್ತದೆ. ಆದರೂ ಪ್ರತಿ ಜಿಲ್ಲೆಯಲ್ಲಿ ಒಟ್ಟಾರೆ 30 ರಿಂದ 40 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯನ್ನು ಮುಂದಿನ 6 ವರ್ಷಗಳಲ್ಲಿ ನಿರೀಕ್ಷಿಸಬಹುದಾಗಿದೆ. ಈ ಅನುದಾನ ಶೇಕಡ 85 ರಷ್ಟು ಕೇಂದ್ರ ಸರ್ಕಾರ ನೀಡುತ್ತದೆ. ಉಳಿದ ಶೇಕಡ 15 ರಷ್ಟು ರಾಜ್ಯ ಸರ್ಕಾರ ಭರಿಸಬೇಕಾಗಿರುತ್ತದೆ. 1995-96ನೇ ಸಾಲಿಗೆ ಈ ಕೆಳಗೆ ತೋರಿಸಿದ ಮೊತ್ತದ ಯೋಜನೆ ನಿಗದಿತ ಜಿಲ್ಲೆಗಳಿಗೆ ಮಂಜೂರಾಗಿರುತ್ತದೆ.

ರಾಜ್ಯ	-	165.760 (ಲಕ್ಷಗಳಲ್ಲಿ)
ಬೆಳಗಾಂ	-	1149.750
ಕೋಲಾರ	-	492.640
ರಾಯಚೂರು	-	613.165
ಮಂಡ್ಯ	-	377.465

ಈ) ಈ ಯೋಜನೆಯನ್ವಯ ಮಂಡ್ಯ ಜಿಲ್ಲೆಗೆ ಇದುವರೆಗೆ ರೂ. 50.00 ಲಕ್ಷ ಹಣ ಬಿಡುಗಡೆಯಾಗಿದ್ದು 31.7.95ರವರೆಗೆ ರೂ. 1.52 ಲಕ್ಷ ಖರ್ಚಾಗಿರುತ್ತದೆ. 1995-96ನೇ ಸಾಲಿಗೆ ಮಂಡ್ಯ ಜಿಲ್ಲೆಗೆ 377.485 ಲಕ್ಷಗಳ ಯೋಜನೆಗೆ ಅನುಮೋದನೆ ದೊರಕಿದೆ. ಯೋಜನೆಯನ್ನು ತಯಾರು ಮಾಡುವಾಗ ಜಿಲ್ಲೆಯನ್ನು ಮೂಲವಾಗಿ ಇಟ್ಟುಕೊಂಡು ತಯಾರಿಸಲಾಗಿರುತ್ತದೆ. ಆಯಾ ಜಿಲ್ಲೆಯಲ್ಲಿ ಅವಶ್ಯಕತೆಗನುಸಾರವಾಗಿ ಆಯಾ ಜಿಲ್ಲೆಯ ಜಿಲ್ಲಾ ಅನುಷ್ಠಾನ ಸಮಿತಿಯು ವಿವಿಧ ತಾಲ್ಲೂಕುಗಳಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡುವ ಜವಾಬ್ದಾರಿ ಹೊಂದಿರುತ್ತದೆ.

ವಿಷಯ:- ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯಾಧಿಕಾರಿಗಳ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಸಂಖ್ಯೆ 1683 (2377)

ಶ್ರೀ ಶಿವಾನಂದ ಎಸ್.ಪಾಟೀಲ್ (ತೀರ್ಕೋಟ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯಾಧಿಕಾರಿಗಳನ್ನು ಕೇವಲ ಮೂರು ತಿಂಗಳಲ್ಲಿ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನಲ್ಲಿ 6 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.

ಆ) ಡಾ|| ಗುಣಾರಿ ಎಂ.ಸಂಪತ್, ಇವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಬಬಲೇಶ್ವರಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿತ್ತು. ಅನಂತರ ಆಡಳಿತಾತ್ಮಕ ಕಾರಣಗಳ ಮೇರೆಗೆ ಅವರ ಸೇವೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ಕಲಕೇರಿಗೆ ಬದಲಾಯಿಸಲಾಗಿದೆ.

ವಿಷಯ:- ಹುಬ್ಬಳ್ಳಿ ನಗರದಲ್ಲಿ ವನಮಹೋತ್ಸವದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1685 (1994)